ಶ್ರೀ ಎಸ್. ಬಂಗಾರಪ್ಪ.—ಈ ಹೇಳಿಕೆಯನ್ನು ತಾವು ಓದಿದ್ದೀರಾ ಎಂಬುದಾಗಿ ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಸಂಪ್ಮನೆ ನನ್ನನ್ನು ಜೈಲಿಗೆ ಕಳುಹಿಸಬೇಕೆಂದು...ನನ್ನನ್ನು ಹಾಳು ಮಾಡಬೇಕೆಂದು ಕಾಯುತ್ತಿದ್ದಾರೆಂಬುದಕ್ಕೆ ಇದೇ ಸಾಕ್ಷಿ. ಹೇಳುವಂತಹದ್ದನ್ನು ಕೇಳಬೇಕೆಂಬ ಸೌಜನ್ಯ ಕೂಡ ಇವರಿಗೆ ಇಲ್ಲ. ಯಾರ ಮೇಲೆ ಬೇಕಾದರೂ ತಪ್ಪು ಹೊರಿಸಬಹುದು. ಇಂತಹ ವ್ಯವಸ್ಥೆಯಲ್ಲಿ ಕಲುಷಿತ ವಾತಾವರಣದಲ್ಲಿ ನೀವೇನು ಸೇಫ್ ಆಗಿ ಇರುತ್ತಿದ್ದೀರಿ ಎಂಬುದಾಗಿ ತಿಳಿದುಕೊಳ್ಳಬೇಡಿ. ನಿಮ್ಮ ಮೇಲೂ ಇಂತಹ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಗೂಬೆ ಕೂರಿಸಬಹುದು;

(ಗೊಂದಲ)

ಇಂತಹ ವ್ಯವಸ್ಥೆ ಇರುವುದರಿಂದ...

(ಗೊಂದಲ)

ವರದಿಗಳನ್ನೊಪ್ಪಿಸುವುದು

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—(ಅಧ್ಯಕ್ಷರು-ಅಂದಾಜುಗಳ ಸಮಿತಿ)

ಅ) ಸಣ್ಣ ನೀರಾವರಿ ಯೋಜನೆಗಳ ಮೇಲಿನ ಸಮಿತಿಯ ಎಂಟನೆಯ ವರದಿ ಹಾಗೂ

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ ಒಂಭತ್ತನೇ ವರದಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಶ್ರೀ ಎಚ್. ಟಿ. ಕೃಷ್ಣಪ್ಪ (ಅಧ್ಯಕ್ಷರು, ಹಕ್ಕುಭಾದ್ಯತೆಗಳ ಸಮಿತಿ).—ಶ್ರೀ ರಾಮಕೃಷ್ಣ ಹೆಗಡೆ, ಮುಖ್ಯಮಂತ್ರಿಗಳು ಮತ್ತು ಶ್ರೀ ಎಸ್. ಬಂಗಾರಪ್ಪ ವಿರುದ್ಧ ನೀಡಿದ್ದ ಹಕ್ಕುಚ್ಯುತಿ ಸೂಚನೆಯ ಬಗ್ಗೆ ಸಮಿತಿಯ ನಾಲ್ಕನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಕೆ. ಮಲ್ಲಪ್ಪ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಹಿಂದುಳಿದ ವರ್ಗಗಳವರಿಗೆ ಸಾರ್ವಜನಿಕ ಉದ್ದಿಮೆಗಳು ಮತ್ತು ಇತರೆ ಸಂಸ್ಥೆಗಳ ಸೇವೆಯಲ್ಲಿ ಇರುವ ನೇಮಕಾತಿಯಲ್ಲಿನ ವಿಾಸಲಾತಿ ಬಗೆಗಿನ ಸಮಿತಿಯ ಎಂಟನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಗಿರಣಿ ರಿಂದ ಲೀಸಾ ಸಕ್ಕರೆಯ ಮೇಲೆ ತೆರಿಗೆಯನ್ನು ವಿಧಿಸಿರುವ ಬಗ್ಗೆ ಬೆಳಗಾಂ ಛೇಂಬರ್ಸ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್‌ನ ಉಪಾಧ್ಯಕ್ಷರು ನೀಡಿರುವ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.

ಶ್ರೀ ಜಿ ಎಸ್. ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಉಪ್ಪುಂದ ಮತ್ತು ಕಂಬದ ಕೋಣೆ ಮಂಡಲ ಪಂಚಾಯಿತ್‌ಗಳ ವ್ಯಾಪ್ತಿಯಲ್ಲಿರುವ ''ಕೊರ್ಸಿ ಬೀಟ್'' ಎಂಬ ಕಾಡಿಟ್ಟ ಅರಣ್ಯವನ್ನು ಉಳಿಸುವ ಬಗ್ಗೆ ಮನವಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ...

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.